ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

**ಕೆ.ಆರ್.ನಗರ**

**ಒ.ಎಸ್.437/2017**

**ಪಿಡಬ್ಲ್ಯೂ-1**

**ದಿನಾಂಕ 06-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ.** ಎಲ್ ವಿ ಆರ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ

ನಾನು ಶಿಕ್ಷಕನಾಗಿ ಮದ್ದುರುಹೊಸೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾರ್ಥಮಿಕ ಶಾಲೆಯಲ್ಲಿ 1998 ರಿಂದ ಆಗಸ್ಟ್ 2016 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಸದರಿ ಗ್ರಾಮಕ್ಕೆ ಕೆ ಆರ್ ನಗರದಿಂದ ಬಂದು ಹೊಗು ಮಾಡುತ್ತಿದ್ದೆ ಎಂದರೆ ಸರಿ.

ಪ್ರತಿವಾದಿ ಇವರಿಗೆ ನಿಪಿ 1 ರಲ್ಲಿ ಹೇಳಿದ ಹಾಗೇ ಸಾಲ ನೀಡಲು ರೂ.60 ಸಾವಿರಗಳನ್ನು ಯಾವ ಬ್ಯಾಂಕಿನಿಂದ ತೆಗೆದುಕೊಂಡು ಬಂದಿರಿ ಎಂದರೆ ಸಾಕ್ಷಿ ಆ ಹಣ ನನ್ನ ಬಳಿ ಇತ್ತು ಅದನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ 1 ನ್ನು ಬರೆಯಲು ಸ್ಟಾಂಪ್ ಪೇಪರನ್ನು ದಿಃ06.02.2014 ರಂದು ಪ್ರತಿವಾದಿಗಳೇ ಖರೀದಿಸಲಾಗಿತ್ತು. ನಿಪಿ 1 ರಲ್ಲಿ ಕೆಲವೊಂದು ಬರವಣಿಗೆಯನ್ನು ಒಡೆದು ಹಾಕಲಾಗಿದೆ ಎಂದರೆ ಸಾಕ್ಷಿ ಕಾಣಿಸುತ್ತಿದೆ ಎಂದು ನುಡಿಯುತ್ತಾರೆ. ನಿಪಿ 1 ನ್ನು ದಿಃ27.07.2014 ರಂದು ಬರೆದಿರುತ್ತಾರೆ. ನಿಪಿ 1 ನ್ನು ಪೆಬ್ರವರಿ ಮಾಹೇಯಲ್ಲಿ ಖರೀದಿಸಿದ್ದು ಆದರೆ ಸದರಿ ದಾಖಲೆ ಮೇಲೆ ಬರವಣಿಗೆಯನ್ನು ಜುಲೈ ಮಾಹೇಯಲ್ಲಿ ಬರೆದಿದ್ದು ಆ ರೀತಿ ವಿಳಂಬಕ್ಕೆ ಕಾರಣ ತೋರಿಸಿ ನಿಮ್ಮ ವಾದ ಪತ್ರದಲ್ಲಿ ನಮೂದಿಸಿದ್ದೀರ ಎಂದರೆ ಸಾಕ್ಷಿ ಮೊದಲನೆಯದಾಗಿ ಹಣ ಸೆಟೆರೇಟ್ ಆಗಿರಲಿಲ್ಲ ನಂತರ ಹಣವನ್ನು ಕೂಡಿಸಿ ಪತ್ರವನ್ನು ಬರೆಸಿರುತ್ತೇವೆ ಎಂದು ನುಡಿಯುತ್ತಾರೆ.

ನನ್ನ ದಾವಾದ ವಾದ ಪತ್ರದಲ್ಲಿ ಪೆಬ್ರವರಿ ಮಾಹೆಯಲ್ಲಿ ಬಾಂಡ್ ಖರೀದಿಸಿದ ಬಗ್ಗೆ ಹಾಗೂ ಅದರ ಮೇಲೆ ಜುಲೈ ಮಾಹೇಯಲ್ಲಿ ಬರವಣಿಗೆಯನ್ನು ಹಣ ಕೂಡಿಸಿದ ನಂತರ ಬರೆಸಲಾಯಿತು ಎಂದು ಕಾಣಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನೋಟೀಸಿನಲ್ಲಾಗಲಿ, ವಾದ ಪತ್ರದಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಬರೆಸಲು ತೊಂದರೆ ಇರಲಿಲ್ಲ.

ನಿಪಿ 1 ನೇ ಪುಟದಲ್ಲಿ ಬರವಣಿಗೆಯನ್ನು ಒಡೆದು ಹಾಕಿದ್ದು ಆ ಬಗ್ಗೆ ಬಿಕ್ಲಂ ದಾರರಿವರು ಷರಾ ಬರೆದಿದ್ದಾರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ದಾಖಲೆ ಬರೆಯಲು ಪತ್ರವನ್ನು ಪ್ರತಿವಾದಿಗಳೇ ಹುಣಸೂರಿನಿಂದ ತಂದಿದ್ದರು. ಸದರಿ ಪತ್ರವನ್ನು ಪತ್ರ ಬರಹಗಾರರಾದ ಡಿ ಸಿ ವೆಂಕಟರಾಜು ಇವರು ಕೆ ಆರ್ ನಗರದಲ್ಲಿ ಬರೆದಿರುತ್ತಾರೆ.

ಸಾಕ್ಷಿಗೆ ಒಂದು ಖಾಲಿ ಆನ್ ಡಿಮ್ಯಾಂಡ್ ಪ್ರೋನೋಟ್ ಮಾದರಿ ದಾಖಲೆಯನ್ನು ತೋರಿಸಿ ಆನ್ ಡಿಮ್ಯಾಂಡ್ ಪ್ರೋನೋಟ್ ದಾಖಲೆ ಈ ರೀತಿ ಇರುತ್ತದೆ ಅಲ್ಲವೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಾದರಿ ದಾಖಲೆಯನ್ನು ಸಾಕ್ಷಿಯ ಗುರುತಿನ ಮೇರೆಗೆ ನಿಡಿ 1 ಎಂದು ಗುರುತಿಸಲಾಯಿತು. ನಿಪಿ 1 ನಿಡಿ 1 ರಂತೆ ಇರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ 1 ಮತ್ತು 2 ರವರು ಕೆ ಆರ್ ನಗರಕ್ಕೆ ಆ ದಿನ ಸಂಜೆ 4.00 ಗಂಟೆಗೆ ಬಂದಿದ್ದರು. ದಿಃ27.07.2014 ರಂದು ನೀವು ನಿಮ್ಮ ಕರ್ತವ್ಯಕ್ಕೆ ರಜೆ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ 1 ರ ಮೇಲೆ ಆನ್ ಡಿಮ್ಯಾಂಡ್ ಪ್ರೋನೋಟ್ ಹಾಗೂ ಹಣ ಸಂದಾಯದ ರಶೀದಿ ಎಂದು ಪ್ರತ್ಯೇಕವಾಗಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

ನಿಪಿ 1 ಕ್ಕೆ ಸಾಕ್ಷಿದಾರರು ಯಾರು ಎಂದು ಹೇಳಲಾಗುತ್ತೆ ಅವರು ಅಪ್ಪಾಜಿ ಗೌಡರು ಹಾಗೂ ವಿಜಯಕುಮಾರ್. ವಿಜಯ್ ಕುಮಾರ್ ಇವರ ತಂದೆ ಹೆಸರು ಸಿದ್ದೇಗೌಡರು. ಅಪ್ಪಾಜಿ ಗೌಡ ಇವರ ತಂದೆ ಹೆಸರು ನೆನಪಿಲ್ಲ.

ನಿಪಿ 1 ಪತ್ರ ಕಲರ್ ಜೆರಾಕ್ಸನಲ್ಲಿ ಬರೆದ ಪತ್ರ ಎಂದರೆ ಸರಿಯಲ್ಲ.. ಸದರಿ ಪತ್ರ ಕಲರ್ ಜೆರಾಕ್ಸ ಎಂದು ಗೊತ್ತಾಗಬಾರದು ಎಂದು ಹೇಳಿ ನಾನು ಹಾಗೂ ಪತ್ರ ಬರಹಗಾರರಿವರು ಶಾಮೀಲಾಗಿ ನಿಪಿ 1 ನ್ನು ಒತ್ತಿ ಬರೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ 1 ಹಾಗೂ 2 ನೇ ಪ್ರತಿವಾದಿ ಇವರು ತಮ್ಮ ಹೆಬೆಟ್ಟಿನ ಗುರುತು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ಕಲರ್ ಜೆರಾಕ್ಸ ಹಾಗೂ ಅದರ ಮೇಲೆ ಇರುವ ಹೆಬೆಟ್ಟಿನ ಗುರುತು 1 ಹಾಗೂ 2 ನೇ ಪ್ರತಿವಾದಿಯವರ ಹೆಬೆಟ್ಟಿನ ಗುರುತು ಅಲ್ಲ ಎಂದು ತಜ್ಞರ ತಪಾಸಣೆಗೆ ಕಳುಹಿಸಲು ತೊಂದರೆ ಇರುವುದಿಲ್ಲ.

ನಿಪಿ 1 ನ್ನು ನನ್ನ ಇಷ್ಟಾನುಸಾರ ತಿದ್ದು ಪಡಿ ಮಾಡಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಆನ್ ಡಿಮ್ಯಾಂಡ್ ಪ್ರೋನೋಟ್ ನ ಭಾಗ ಹಾಗೂ ಹಣ ಸಂದಾಯ ರಶೀದಿಯ ಬಾಗ ಪ್ರತ್ಯೇಕವಾಗಿ ಬರೆಸುವಲ್ಲಿ ತೊಂದರೆ ಇರಲಿಲ್ಲ. ನಿಪಿ 1 ನ್ನು ಯಾವುದೇ ಉದ್ದೇಶಕ್ಕೆ ಖರೀದಿ ಮಾಡಿ ಅದನ್ನು ನಾನು ನಿಪಿ 1 ರ ಉದ್ದೇಶಕ್ಕೆ ಸೃಷ್ಟಿ ಮಾಡಿರುವ ಪತ್ರ ಎಂದರೆ ಸರಿಯಲ್ಲ..

ನನ್ನ ಹಾಗೂ ಪ್ರತಿವಾದಿಗಳ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದಿದ್ದರೂ ಸಹ ನಾನು ದುರುದ್ದೇಶದಿಂದ ಅವರ ವಿರುದ್ಧ ನಿಪಿ 1 ನ್ನು ಸೃಷ್ಟಿ ಮಾಡಿ ಸದರಿ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಇವರುಗಳಿಗೆ ನೋಟೀಸು ನೀಡಿದಾಗ ಆಗ ಅವರು ಬಂದು ಕೇಳಿದಾಗ ಅವರ ವಿರುದ್ಧ ಯಾವುದೇ ದಾವೆ ದಾಖಲಿಸುವುದಿಲ್ಲ ಎಂದು ಹೇಳಿದ್ದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿದ್ದು ಮುಂದಿನ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ